ಪ್ರಸಾದ ಅಂದಾಕ್ಷಣ ಸರತಿಸಾಲಿನಲ್ಲಿ ನಿಂತು... ಅಂಗೈಯಲ್ಲಿ ತೆಗೆದುಕೊಂಡು... ಕಣ್ಣಿಗೊತ್ತಿಕೊಂಡು ಭಕ್ತಿಯಿಂದ ಸೇವಿಸಿ ಕೃತಕೃತ್ಯರಾಗುವ ದೃಶ್ಯ ನಿಮ್ಮ ಕಣ್ಣಿಗೆ ಕಟ್ಟಬಹುದು. ನಿಜವೇ... ಪ್ರಸಾದವೆಂದರೆ ಹಾಗೆಯೇ. ಪ್ರತಿಯೊಂದು ದೇವಸ್ಥಾನದಲ್ಲೂ ದೇವರ ಜೊತೆ ಪ್ರಸಾದದ ಆಕರ್ಷಣೆಯೂ ಇದ್ದೇ ಇರುತ್ತದೆ ಎಂಬುದು ನನ್ನ ಅಭಿಪ್ರಾಯ. ಗಣಪನಿಗೆ ಕಡುಬಿನ ಹಾರ, ಆಂಜನೇಯನಿಗೆ ವಡೆಹಾರ, ಸತ್ಯನಾರಾಯಣ ಪ್ರಸಾದ, ಕೋಸಂಬರಿ, ಸಿಹಿ ಅವಲಕ್ಕಿ, ಹುಳಿ ಅವಲಕ್ಕಿ, ಕಾಳುಗಳ ಕೋಸಂಬರಿ, ಚರಪು... ಒಂದೇ ಎರಡೇ. ಎಷ್ಟು ದೇವರೋ... ಅಷ್ಟು ಬಗೆಯ ಪ್ರಸಾದಗಳು. ಅದಕ್ಕಾಗೇ ದೇವಸ್ಥಾನಕ್ಕೆ ಬರುವ ಜನರಿದ್ದಾರೆ. ವಿಶೇಷವಾಗಿ ಚಿಣ್ಣರು. ಆದರೆ, ನಮ್ಮದು ಕೊಂಚ ಭಿನ್ನ ಶೈಲಿಯ ಪ್ರಸಾದದ ಕತೆ. ಅದೂ ನನಗೆ ಜ್ಞಾಪಕಕ್ಕೆ ಬಂದದ್ದು ಗೆಳತಿ ಪ್ರತಿಭಾ ಫೋನ್ ಮಾಡಿ, “ಶಿರಡಿಯೊಳಗಿದ್ದೇನಿ. ನಾಳೆ ಶನಿ ಸಿಂಗಣಾಪುರಕ್ಕ ಹೊಂಟೇನಿ. ನಿನಗ ಸಾಯಿಬಾಬಾನ ಪ್ರಸಾದ ತೊಗೊಂಬರ್ತೇನಿ” ಎಂದು ಮುಗಿಸಿದವಳು ಮತ್ತೆ, “ಬೆಳಗಾವಿ ಸಾಯಿಬಾಬಾನ ಪ್ರಸಾದ ಅಲ್ಲ ಮತ್ತ... ಖರೆ ಪ್ರಸಾದ. ಆ ದಿನಗೊಳು ನೆನಪಿಗೆ ಬಂದ್ವೇನು?

